# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 316(419)
2) ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 12.12.2018
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ವನ್ಯಧಾಮಗಳಿವೆ; ಅವು ಯಾವುವು; ಅವುಗಳ ವಿಸ್ತೀರ್ಣವೆಷ್ಟು; | ರಾಜ್ಯದಲ್ಲಿ ಒಟ್ಟು 5 ರಾಷ್ಟ್ರೀಯ ಉದ್ಯಾನವನ, 30 ಅಭಯಾರಣ್ಯಗಳು, 15 ಸಂರಕ್ಷಣಾ ಮೀಸಲು ಪ್ರದೇಶಗಳು ಮತ್ತು 1 ಸಮುದಾಯ ಮೀಸಲು ಪ್ರದೇಶವಿದ್ದು, ಸದರಿ ಪ್ರದೇಶಗಳ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತಿವೆ:- |

| ರಾಷ್ಟ್ರೀಯ ಉದ್ಯಾನವನ / ವನ್ಯಧಾಮ | ಪ್ರದೇಶ ಚ. ಕಿ. ಗಳಲ್ಲಿ |
|---|---|
| 1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 260.51 |
| 2. ರಾಮದೇವರ ಬೆಟ್ಟ ರಣಹದ್ದುಧಾಮ | 3.46 |
| 3. ಆದಿಚುಂಚನಗಿರಿ ನವಿಲುಧಾಮ | 0.34 |
| 4. ರಂಗನತಿಟ್ಟು ಪಕ್ಷಿಧಾಮ | 0.67 |
| 5. ಅರಭಿತಿಟ್ಟು ಪಕ್ಷಿಧಾಮ | 13.50 |
| 6. ಮೇಲುಕೋಟೆ ವನ್ಯಧಾಮ | 49.82 |
| 7. ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ. | 539.52 |
| 8. ಕಾವೇರಿ ವನ್ಯಧಾಮ | 1027.53 |
| 9. ಮಲೈಮಹದೇಶ್ವರ ವನ್ಯಧಾಮ | 906.187 |
| 10. ಪುಷ್ಪಗಿರಿವನ್ಯಧಾಮ | 102.92 |
| 11. ತಲಕಾವೇರಿ ವನ್ಯಧಾಮ | 105.59 |
| 12 ಬ್ರಹ್ಮಗಿರಿ ವನ್ಯಧಾಮ | 181.29 |
| 13. ಕುದುರೆಮುಖ ರಾಷ್ಟ್ರೀಯ ಉದ್ಯಾನವನ | 600.57 |
| 14. ಸೋಮೇಶ್ವರ ವನ್ಯಧಾಮ | 314 25 |
| 15. ಮೂಕಾಂಬಿಕ ವನ್ಯಧಾಮ | 370.37 |
| 16. ದಾಂಡೇಲಿ ಹುಲಿ ಸಂರಕ್ಷಿತ ಪ್ರದೇಶ. | 886.41 |
| 17. ಅಣಶಿ ಹುಲಿ ಸಂರಕ್ಷಿತ ಪ್ರದೇಶ, | 417.34 |
| 18. ಶೆಟ್ಟಿಹಳ್ಳಿ ವನ್ಯಧಾಮ | 395 60 |
| 19. ಶರಾವತಿ ವನ್ಯಧಾಮ | 431.23 |
| 20. ಗುಡವಿ ವನ್ಯಧಾಮ | 0.73 |
| 21. ಭದ್ರಾ ವನ್ಯಧಾಮ | 500.16 |
| 22. ರಾಣೇಬೆನ್ನೂರು ಕೃಷ್ಣಮೃಗಧಾಮ | 119.00 |
| 23. ಅತ್ತಿವೇರಿ ಪಕ್ಷಿಧಾಮ | 2.23 |
| 24. ದಾರೋಜಿ ಕರಡಿ ಧಾಮ | 82.72 |
| 25. ರಂಗಯ್ಯನದುರ್ಗಾ ಕೊಂಡುಕುರಿ ವನ್ಯಧಾಮ | 77.23 |
| 26. ಗುಡೇಕೋಟೆ ಕರಡಿಧಾಮ | 47.61 |
| 27. ಜೋಗಿಮಟ್ಟಿ ವನ್ಯಧಾಮ | 100.48 |
| 28. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | 872.24 |

| | |
|---|---|
| 29. ಸುಗು ವನ್ಯಧಾಮ | 30.32 |
| 30. ಸಾಗರಮೂಲೆ ಹುಲಿ ಸಂರಕ್ಷಿತ ಪ್ರದೇಶ | 643.39 |
| 31. ಭೀಮಗಡ ವನ್ಯಧಾಮ | 190.42 |
| 32. ಘಟಪ್ರಭಾ ಪಕ್ಷಿಧಾಮ | 29.78 |
| 33. ಯಡಹಳ್ಳಿ ಚಿಂಕಾರ ವನ್ಯಧಾಮ | 96.36 |
| 34. ಚಿಂಚೋಳಿ ವನ್ಯಧಾಮ | 134.88 |
| 35. ತಿಮ್ಲಾಪುರ ವನ್ಯಧಾಮ | 50.86 |
| ಒಟ್ಟು ಪ್ರದೇಶ: | 9,586.017 |

<u>ಸಮುದಾಯಗಳು : ರಕ್ಷಣೆ ಮತ್ತು ಮೀಸಲು ಪ್ರದೇಶಗಳು</u>

| ಕ್ರ ಸಂ. | ಜಿಲ್ಲೆ | ಹೆಸರು | ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ) |
|---|---|---|---|
| 1 | ಹಾವೇರಿ | ಬಂಕಾಪುರ ನವಿಲು ಸಂರಕ್ಷಣಾ | 0.560 |
| 2 | ತುಮಕೂರು | ಮೈದನಹಳ್ಳಿ (ಜಯಮಂಗಳಿ) ಕೃಷ್ಣಮೃಗ ಸಂರಕ್ಷಣಾ ಮೀಸಲು | 3.230 |
| 3 | ಚಿಕ್ಕಮಗಳೂರು | ಬಸೂರು ಅಮೃತ್ ಮಹಲ್ ಸಂರಕ್ಷಣಾ ಮೀಸಲು ಪ್ರದೇಶ | 7.360 |
| 4 | ಉತ್ತರ ಕನ್ನಡ | ಹಾರ್ನ್‌ಬಿಲ್ ಸಂರಕ್ಷಣಾ ಮೀಸಲು ಪ್ರದೇಶ | 52.500 |
| 5 | ಉತ್ತರ ಕನ್ನಡ | ಅಘನಾಶಿನಿ ಸಂರಕ್ಷಣಾ ಮೀಸಲು | 299.520 |
| 6 | ಉತ್ತರ ಕನ್ನಡ | ಬೇಡ್ತಿ ಸಂರಕ್ಷಣಾ ಮೀಸಲು ಪ್ರದೇಶ | 57.300 |
| 7 | ಉತ್ತರ ಕನ್ನಡ | ಶಾಲ್ಮಲ ರಿಪೇರಿಯನ್ ಎಕೋ-ಸಿಸ್ಟಂ ಸಂರಕ್ಷಣಾ ಮೀಸಲು ಪ್ರದೇಶ | 4.890 |
| 8 | ಬಳ್ಳಾರಿ | ತುಂಗಭದ್ರಾ ನೀರುನಾಯಿ ಸಂರಕ್ಷಣಾ | 0.200 |
| 9 | ಬೆಂಗಳೂರು | ಪುಟ್ಟೇನಹಳ್ಳಿ ಕೆರೆ ಪಕ್ಷಿಗಳ ಸಂರಕ್ಷಣಾ | 0.150 |
| 10 | ಗದಗ | ಮಾಗಡಿ ಕೆರೆ ಸಂರಕ್ಷಣಾ ಮೀಸಲು ಪ್ರದೇಶ | 0.540 |
| 11 | ಗದಗ | ಮೇಲಾಪುರ ಬೀ ಇಟರ್ ಬರ್ಡ್ | 0.0218 |
| 12 | ಮಂಡ್ಯ | ತಿಮ್ಮಲಾಪುರ ಸಂರಕ್ಷಣಾ ಮೀಸಲು | 17.38 |
| 13 | ಹಾಸನ | ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶ | 178.72 |
| 14 | ಬಳ್ಳಾರಿ | ಅಂಕಸಮುದ್ರ ಪಕ್ಷಿಗಳ ಸಂರಕ್ಷಣಾ | 0.9876 |
| 15 | ಚಾಮರಾಜನಗರ | ಉಮ್ಮತ್ತೂರು ಸಂರಕ್ಷಣಾ ಮೀಸಲು | 6.030 |
| 16 | ಮಂಡ್ಯ | ಕೊಕ್ಕರೆ ಬೆಳ್ಳೂರು ಸಮುದಾಯ | 3.120 |
| | | ಒಟ್ಟು: | 652.369 |
| | | ಒಟ್ಟು: | 10,238.3 |

| | | |
|---|---|---|
| ಆ) | ಚಿಂಕಾರ ವನ್ಯಜೀವಿಧಾಮ ಯೋಜನೆ ಯಾವ ಹಂತದಲ್ಲಿದೆ; ಈ ಯೋಜನೆಯನ್ನು ಯಾವ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುವುದು; | ಕರ್ನಾಟಕದಲ್ಲಿ ಒಂದು ಚಿಂಕಾರ ವನ್ಯಜೀವಿಧಾಮವನ್ನು ಗುರುತಿಸಲಾಗಿರುತ್ತದೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ಮತ್ತು ಮುಧೋಳ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಚಿಂಕಾರ ಮತ್ತು ಇತರೆ ವನ್ಯಜೀವಿಗಳ ಸಂರಕ್ಷಣೆಗಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 204 ಎಫ್‌ಡಬ್ಲ್ಯೂಎಲ್ 2015, ದಿನಾಂಕ: 23.12.2015ರಂದು "ಎಡಹಳ್ಳಿ ಚಿಂಕಾರ ವನ್ಯಜೀವಿಧಾಮ"ವೆಂದು ಘೋಷಿಸಿ ಸಂರಕ್ಷಿಸಲಾಗುತ್ತಿದೆ. |

| | | |
|---|---|---|
| ಇ) | ರಾಜ್ಯದಲ್ಲಿ ವನ್ಯಜೀವಿಗಳ ಗಣತಿ ಕಾರ್ಯವಾಗಿದೆಯೇ; ಯಾವ ಯಾವ ವನ್ಯಜೀವಿಗಳು ಎಷ್ಟು ಸಂಖ್ಯೆಯಲ್ಲಿ ಯಾವ ಅರಣ್ಯ ಪ್ರದೇಶದಲ್ಲಿ ಇವೆ; ವನ್ಯಜೀವಿ ಗಣತಿ ಕಾರ್ಯ ಪ್ರಾರಂಭವಾಗದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು; | ರಾಜ್ಯದಲ್ಲಿ ಹುಲಿ ಮತ್ತು ಆನೆ ಗಣತಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಸದರಿ ವಿವರಗಳು ಈ ಕೆಳಕಂಡಂತಿವೆ:-<br>• ಸಮಗ್ರ ರಕ್ಷಣೆ ಮತ್ತು ಸಂರಕ್ಷಣಾ ಕ್ರಮಗಳಿಂದ ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ 2014ನೇ ಸಾಲಿನ ಹುಲಿ ಗಣತಿ ಪ್ರಕಾರ ಒಟ್ಟು 406 ಹುಲಿಗಳಿದ್ದು, ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿಯೇ ಅತಿ ಹೆಚ್ಚಿನ ಹುಲಿಗಳಿರುವ ರಾಜ್ಯವೆಂದು ಗುರುತಿಸಲ್ಪಟ್ಟಿರುತ್ತದೆ. 2018ನೇ ಸಾಲಿನಲ್ಲಿ ಹುಲಿ ಗಣತಿ ಕಾರ್ಯಕ್ರಮವನ್ನು ಕ್ಯಾಮರಾ ಟ್ರಾಪ್ ಮೂಲಕ ಕೈಗೊಳ್ಳಲಾಗುತ್ತಿದ್ದು, ಕಾರ್ಯವು ಪ್ರಗತಿಯಲ್ಲಿರುತ್ತದೆ.<br>• 2012ನೇ ಸಾಲಿನಲ್ಲಿ ಕೈಗೊಂಡ ಆನೆ ಗಣತಿಯ ಪ್ರಕಾರ ಕರ್ನಾಟಕ ರಾಜ್ಯವು 6072 ಆನೆಗಳನ್ನು ಹೊಂದಿದ್ದು, ದೇಶದ ಒಟ್ಟು ಆನೆಗಳ ಶೇ.25%ರಷ್ಟು ರಾಜ್ಯದಲ್ಲಿ ಕಂಡುಬಂದಿರುವುದು ವಿಶೇಷತೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ (2017ನೇ ಮೇ ತಿಂಗಳಲ್ಲಿ) ರಾಷ್ಟ್ರದ ಆನೆ ಗಣತಿಯನ್ನು ಕೈಗೊಳ್ಳಲಾಗಿದೆ. ಕ್ರೋಢೀಕೃತ ಮಾಹಿತಿಯು ಮುಕ್ತಾಯದ ಹಂತದಲ್ಲಿದ್ದು, ಭಾರತ ಸರ್ಕಾರದಿಂದ ಸದ್ಯದಲ್ಲೇ ಆನೆಗಣತಿಯ ವರದಿಯನ್ನು ಬಿಡುಗಡೆ ಮಾಡಲಾಗುವುದು. |
| ಈ) | ವನ್ಯಜೀವಿ ಮತ್ತು ಮಾನವರ ಸಂಘರ್ಷ ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ವನ್ಯಜೀವಿ ಮತ್ತು ಮಾನವ ಸಂಘರ್ಷ ತಡೆಯಲು ಅರಣ್ಯ ಇಲಾಖೆ ಈ ಕೆಳಕಂಡ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1) ಸೌರಶಕ್ತಿ ಬೇಲಿ ನಿರ್ಮಾಣ/ ನಿರ್ವಹಣೆ<br>2) ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ<br>3) ವನ್ಯಜೀವಿಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳ ನಿರ್ಮಾಣ/ನಿರ್ವಹಣೆ<br>4) ಬೇಟೆ ತಡೆ ಶಿಬಿರ ಹಾಗೂ ಕ್ಷಿಪ್ರ ಕಾರ್ಯಪಡೆ (Rapid Response Team) ತಂಡಗಳಿಗೆ ನಿಸ್ತಂತು ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>5) ವನ್ಯಪ್ರಾಣಿಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>6) ವನ್ಯಪ್ರಾಣಿಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>7) ಕಾಡಾನೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಆನೆ ಗುಂಪುಗಳ ಒಂದೊಂದು ಗುಂಪಿನ ಒಂದು ವಯಸ್ಕ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸಿ, 24 ಗಂಟೆ ಆನೆಹಿಂಡಿನ ಚಲನ-ವಲನಗಳ ಮೇಲೆ ನಿಗಾ ವಹಿಸಿ, ಸದರಿ ಆನೆಗಳು ಯಾವ ಯಾವ ಪ್ರದೇಶಗಳಲ್ಲಿ ಚಲಿಸುತ್ತಿವೆ ಎಂಬ ವಿಷಯವನ್ನು ಎಸ್.ಎಂ.ಎಸ್. ಮುಖಾಂತರ ಸ್ಥಳೀಯ ಜನರಿಗೆ ಆಗಿಂದ್ದಾಗ್ಗೆ ಮಾಹಿತಿ ನೀಡಲಾಗುತ್ತಿದೆ.<br>8) ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಕಾಡಾನೆಗಳನ್ನು ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ. |

| | | |
|---|---|---|
| | | 9) ರೈತರಿಗೆ ಸೋಲಾರ್ ಬೇಲಿ ನಿರ್ಮಾಣಕ್ಕೆ ಶೇ 50ರಷ್ಟು ಧನ ಸಹಾಯವನ್ನು ಇಲಾಖೆಯಿಂದ ನೀಡಲಾಗುತ್ತಿದೆ. |

ಸಂಖ್ಯೆ: ಅಪಜೀ 181 ಎಫ್‌ಡಬ್ಲ್ಯೂಎಲ್ 2018

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು